ವೀಳ್ಯದೆಲೆಯ ಹಿಂಬದಿಯ ನಾರನ್ನು ಕೀಳುತ್ತಾ ರಾಮಚಂದ್ರ ಕೇಳಿದ.

'ಕಿದರ್ ಕಾ ಹೆ ತುಂ?'

'ಬಿಹಾರ್.'

'ಓ... ಹಮಾರ ಲಾಲೂಜಿ ಕಾ ದೇಶ್ ಹೆ ನಾ?'

ಗೋಪಾಲ್ ಯಾದವ್ ನಕ್ಕ. ಆಗ ತಿಳಿಯಿತು, ಆತನ ಮುಂಬದಿಯ ಮೂರು ಹಲ್ಲುಗಳು ಬಿದ್ದು ಹೋಗಿವೆಯೆಂದು.

'ತುಂ ಕಿತ್ನಾ ಸಾಲ್ ಹೋಗಯಾ ಇದರ್?'

'ಸಾತ್.'

'ಅಭೀ ತುಂ ಮಲಯಾಳಂ ಸೀಕಾನಹೀ?'

ಗೋಪಾಲ್ ಯಾದವ್ ಮೀಟಾಪಾನ್‌ನ ರಸವನ್ನು ಹೀರುತ್ತಾ, 'ಕಲ್ತಿದ್ದೇನೆ' ಎಂಬಂತೆ ತಲೆಯಾಡಿಸಿದ.

'ಒಂದು ಕೆಲಸ ಇದೆ ಮಾಡ್ತಿಯೇನು?'

'ಮಾಡ್ತೀನಿ' ಎಂಬಂತೆ ಅವನು ಮತ್ತೊಮ್ಮೆ ತಲೆಯಾಡಿಸಿದ.

ಸುಣ್ಣ ಮೆತ್ತಿದ್ದ ಬೆರಳನ್ನು ಬಟ್ಟೆಗೆ ಒರೆಸಿಕೊಂಡು ರಾಮಚಂದ್ರ ಮೊಬೈಲ್ ಎತ್ತಿದ. ಅಸ್ಸೈನಾರ್‌ಗೆ ಫೋನ್ ಮಾಡಿ ವಿಷಯ ತಿಳಿಸಿದ. ಕೆಲಸದವನೊಬ್ಬನ ಅಗತ್ಯವಿದೆಯೆಂದು ಅಸ್ಸೈನಾರ್ ರಾಮಚಂದ್ರನಿಗೆ ಸ್ವಲ್ಪ ಮುಂಚೆಯೇ ಹೇಳಿದ್ದರು.

ಅರ್ಧಗಂಟೆ ಕಳೆದಿರಬಹುದಷ್ಟೆ. ಅಸ್ಸೈನಾರ್ ಅವರ ಫಾರ್ಚುನರ್ ಗಕ್ಕೆಂದು ಬ್ರೇಕ್ ಹಾಕಿ ರಾಮಚಂದ್ರನ ಅಂಗಡಿಯ ಮುಂದೆ ನಿಂತುಕೊಂಡಿತು. ಕಾರಿನಿಂದ ಕೆಳಕಕ್ಕಿಳಿದ ಅಸ್ಸೈನಾರ್ ಒಳಚಡ್ಡಿಯ ಕಿಸೆಯೊಳಕ್ಕೆ ಕೈ ತೂರಿಸಿ ತೊಡೆ ಮತ್ತು ವೃಷಣದ ನಡುವೆ ಕೆರೆ ಕರೆದು ತೃಪ್ತಿಯ ನಿಟ್ಟುಸಿರು ಬಿಟ್ಟರು. ರಾಮಚಂದ್ರ ಏರ್ಪಾಡು ಮಾಡಿದ ಕೆಲಸದವನು ತನ್ನ ಮುಂದೆ ಮೈಬಾಗಿಸಿ ವಿನಯದಿಂದ ನಿಂತಿದ್ದಾನೆಂದು ಅಸ್ಸೈನಾರ್ ಊಹಿಸಿದರು. ಅವರು ನೇರವಾಗಿ ಗೋಪಾಲ್ ಯಾದವನ ಮುಖನೋಡದೆ ಕೇಳಿದರು,

'ಇನ್ನೂರೈವತ್ತು ಕೊಡ್ತೀನಿ, ಬರ್ತೀಯಾ?'

'ಸಾಬ್, ಮುನ್ನೂರೈವತ್ತು ಮಾಡ್ಕಳ್ಳಿ...' ಗೋಪಾಲ್ ಯಾದವ್ ಯಾಚಿಸಿದ.

'ನೋಡಯ್ಯ ಇಲ್ಲಿ ಮಲಯಾಳಿಗಳಿಗೆ 600 ರೂಪಾಯಿ, ತಮಿಳರಿಗೆ 500 ರೂಪಾಯಿ, ಬಂಗಾಳಿಗೆ 350, ಬಿಹಾರಿಗೆ 250 ರೂಪಾಯಿಗಳನ್ನ ಕೊಡ್ತಾರೆ. ಕೆಲಸ ಇರೋದು ನಾಲ್ಕೈದು ಗಂಟೆಗಳು ಮಾತ್ರ. ಗಂಟೆಗೆ 50 ರೂಪಾಯಿಗಿಂತಲೂ ಹೆಚ್ಚಿಗೆ ಕೊಡ್ಲಿಕ್ಕೆ ಆಗಲ್ಲಪ್ಪ. ಈಗ ಹೇಳು, ನಿನಗೆ ಒಪ್ಪಿಗೇನಾ ಇಲ್ವಾ?'

ಅಸ್ಸೈನಾರ್ ಒಂದು ವಿಲ್ಸನ್ನು ತುಟಿಗಳ ನಡುವೆ ಇಟ್ಟು ಹಚ್ಚಿಕೊಂಡರು.

'ಅಸ್ಸೈನಾರಣ್ಣ, ಬಹಳ ದೊಡ್ಡ ಸಮಾರಂಭಾಂತ ಕೇಳ್ಪಟ್ಟೆ. ಬಿರಿಯಾನಿ ತಯಾರಿಸಲಿಕ್ಕೆ ಹೈದರಾಬಾದ್, ಅಬುದಾಬಿಯಿಂದೆಲ್ಲಾ ಅಡಿಗೆಯವರನ್ನು ಕರೆಸಿದ್ದೀರಂತೆ.' ರಾಮಚಂದ್ರ ಕುತೂಹಲದಿಂದ ಕೇಳಿದ.

'ಹೌದು ರಾಮಚಂದ್ರ. ಬಿರಿಯಾನಿಯಷ್ಟೇ ಅಲ್ಲ, ಕುಯಿಮಾಂದಿ(ಅರೇಬಿಯಾದ ಒಂದು ವಿಶೇಷ ಬಿರಿಯಾನಿ)ಯನ್ನು ಹಾಜಿಯವರು ಹಾಕ್ಸಿದ್ದಾರೆ. ಇಲ್ಲಿನ ಲೋಕಲ್ ಮುಸಲ್ಮಾನರು ಕೊಡುವ ಕಾಂಜೀಪೀಂಜಿ ಬಿರಿಯಾನಿಯಲ್ಲ. ಫಸ್ಟ್‌ಕ್ಲಾಸ್ ಬಾಸುಮತಿ ಅಕ್ಕಿಯಿಂದ ತಯಾರಿಸಿದ